ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು (ಮುಂದು)

ಬಿಜಾಪುರದ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಹೊಸದಾಗಿ ಸರ್ಕಾರಿ ಪ್ರೌಢಶಾಲೆ ಹಾಗೂ ಪದವಿಪೂರ್ವ ಕಾಲೇಜು, ಮಂಜೂರು ಮಾಡುವುದು.

30 (158) ಶ್ರೀ ಅಪ್ಪಸಾಹೇಬ್ (ಅಪ್ಪು) ಮಲ್ಲಪ್ಪ ಪಟ್ಟಣಶೆಟ್ಟಿ (ಬಿಜಾಪುರ): ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬಿಜಾಪುರ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಪ್ರೌಢಶಾಲೆ ಹಾಗೂ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಸಂಖ್ಯೆ ಎಷ್ಟು ಹಾಗೂ ಅವು ಯಾವುವು;

ಆ) ಹೆಚ್ಚುತ್ತಿರುವ ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಸರ್ಕಾರಿ ಪ್ರೌಢಶಾಲೆ ಹಾಗೂ ಪದವಿಪೂರ್ವ ಕಾಲೇಜುಗಳು ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಬಂದಿದ್ದಲ್ಲಿ, ಹೊಸದಾಗಿ ಸರ್ಕಾರಿ ಪ್ರೌಢಶಾಲೆಗಳನ್ನು ಹಾಗೂ ಸರ್ಕಾರಿ ಪದವಿಪೂರ್ವ ಕಾಲೇಜುಗಳನ್ನು ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಈ) ಹಾಗಿದ್ದಲ್ಲಿ, ಯಾವಾಗ ಪ್ರಾರಂಭಿಸಲಾಗುವುದು ಮತ್ತು ಎಷ್ಟು ಸರ್ಕಾರಿ ಪ್ರೌಢಶಾಲೆ ಹಾಗೂ ಪದವಿಪೂರ್ವ ಕಾಲೇಜುಗಳನ್ನು ಮಂಜೂರು ಮಾಡಲಾಗುವುದು.

ಉ) ಅದಕ್ಕಾಗಿ ಸರ್ಕಾರ ಹಾಕಿಕೊಂಡಿರುವ ಯೋಜನೆಗಳೇನು?

ಶ್ರೀ ಬಿ.ಎಸ್. ಪೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ಬಿಜಾಪುರ ಮತ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ 07 ಪ್ರೌಢಶಾಲೆ, 03 ಪದವಿ ಪೂರ್ವ ಕಾಲೇಜುಗಳ ವಿವರಗಳು ಇಂತಿವೆ.

(ಅ) ನಗರದಲ್ಲಿರುವ ಪ್ರೌಢಶಾಲೆಗಳು	ಗ್ರಾಮೀಣ ಪ್ರದೇಶದಲ್ಲಿರುವ ಪ್ರೌಢಶಾಲೆಗಳು
1) ಜಿ.ಹೆಚ್.ಎಸ್. ಬಿಜಾಪುರ	1) ಜಮನಾಳ
2) ಜಿ.ಹೆಚ್.ಎಸ್. (ಬಾಲಕಿಯರು) ಬಿಜಾಪುರ	2) ಬುರಾಣಪುರ
3) ಜಿ.ಹೆಚ್.ಎಸ್. ಉರ್ದು ಪ್ರೌಢಶಾಲೆ, ಬಿಜಾಪುರ.	3) ಹೊನ್ನಾಟಗಿ
	4) ಕಗ್ಗೋಡ

(ಆ) ನಗರದಲ್ಲಿರುವ ಪದವಿ ಪೂರ್ವ ಕಾಲೇಜುಗಳು	ಗ್ರಾಮೀಣ ಪ್ರದೇಶದಲ್ಲಿರುವ ಪದವಿಪೂರ್ವ ಕಾಲೇಜುಗಳು
1) ಸರ್ಕಾರಿ ಬಾಲಕರ ಪ.ಪೂ.ಕಾ.	1) ನಾಗಾಠಾಣ
2) ಸರ್ಕಾರಿ ಬಾಲಕಿಯರ ಪ.ಪೂ.ಕಾ.	

ಆ) ಹೌದು.

ಇ) ಪ್ರಸ್ತಾವನೆಗಳು ಬಂದಿದ್ದು, ಪ್ರೌಢಶಿಕ್ಷಣ, ಪದವಿಪೂರ್ವ ನಿರ್ದೇಶನಾಲಯಗಳ ಪರಿಶೀಲನೆಯಲ್ಲಿದೆ.

ಈ) ಮತ್ತು ಉ) ಪ್ರೌಢಶಾಲೆ ಹಾಗೂ ಪದವಿ ಪೂರ್ವ ಕಾಲೇಜುಗಳ ಪ್ರಾರಂಭದ ವಿಷಯವು ಸರ್ಕಾರದಲ್ಲಿ ನಿರಂತರ ಪ್ರಕ್ರಿಯೆಯಾಗಿದ್ದು, ಸ್ಥಳೀಯ ಅಗತ್ಯತೆ, ವಿದ್ಯಾರ್ಥಿಗಳ ಸಂಖ್ಯೆ, ಹಣಕಾಸಿನ ಲಭ್ಯತೆಯನ್ನು ಆಧಾರವಾಗಿಟ್ಟುಕೊಂಡು ಅಗತ್ಯ ಸಂಖ್ಯೆಯಷ್ಟು ಪ್ರೌಢಶಾಲೆ / ಪದವಿ ಪೂರ್ವ ಕಾಲೇಜುಗಳನ್ನು ಮಂಜೂರು ಮಾಡಲಾಗುತ್ತಿದೆ.

ಶ್ರೀ ಅಪ್ಪಾಸಾಹೇಬ್ (ಅಪ್ಪು) ಮಲ್ಲಪ್ಪ ಪಟ್ಟಣಶೆಟ್ಟಿ : ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಿದ್ದಾರೆ. ಈ ವಿಷಯವು ಸರ್ಕಾರದ ನಿರಂತರ ಪ್ರಕ್ರಿಯೆಯಾಗಿದ್ದು, ವಿದ್ಯಾರ್ಥಿಗಳ ಸಂಖ್ಯೆ, ಹಣಕಾಸಿನ ಲಭ್ಯತೆಯನ್ನು ಆಧಾರವಾಗಿಟ್ಟುಕೊಂಡು ಪ್ರೌಢಶಾಲೆ ಮತ್ತು ಪದವಿಪೂರ್ವ ಕಾಲೇಜುಗಳನ್ನು ಮಂಜೂರು ಮಾಡಲಾಗುತ್ತದೆಂದು ಹೇಳಿದ್ದಾರೆ. ಜನ [illegible]ಂದ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಿರುವುದರಿಂದ ಬಿಜಾಪುರದ ನನ್ನ ಮತಕ್ಷೇತ್ರದ ನಗರ ಹಾ[illegible]ಣ ಪ್ರದೇಶಗಳಲ್ಲಿ ಹೊಸ ಸರ್ಕಾರಿ ಪದವಿಪೂರ್ವ ಹಾಗೂ ಪ್ರೌಢಶಾಲೆಗಳನ್ನು ತೆರ[illegible]ಬೇಗನೆ ಈ ಪ್ರೌಢಶಾಲೆಗಳು ಹಾಗೂ ಪದವಿಪೂರ್ವ ಕಾಲೇಜುಗಳನ್ನು ಮಂಜು[illegible]ಕೊಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಬಿ.ಎಸ್. ಹೊರಟ್ಟಿ : ಮಾನ್ಯ ಅಧ್ಯಕ್ಷರೆ, ಈಗಾಗಲೇ [illegible]ಜಾಪುರ ಜಿಲ್ಲೆಯಿಂದ ಪ್ರಸ್ತಾವನೆ ಸರ್ಕಾರಕ್ಕೆ ಬಂದಿದೆ. ಸರ್ಕಾರಿ ಪ್ರೌಢಶಾಲೆಗಳನ್ನು ಪ್ರಾರಂಭ ಮಾಡಬೇಕು, ಜೂನಿಯರ್ ಕಾಲೇಜುಗಳನ್ನು ಪ್ರಾರಂಭ ಮಾಡಬೇಕು, ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗಿದೆ. ಇದಕ್ಕೆ ಈಗಾಗಲೇ ಒತ್ತಡ ಇದೆಯೆನ್ನುವ ಪ್ರಸ್ತಾವ ಬಂದಿದ್ದು ಸರ್ಕಾರದ ಪರಿಶೀಲನೆಯಲ್ಲಿದೆ. ಈ ಅಧಿವೇಶನ ಆದ ನಂತರ ಪರಿಶೀಲನೆ ಮಾಡಿ, ಚರ್ಚೆ ಮಾಡಿ ಎಲ್ಲಿ ಅವಶ್ಯಕತೆ ಇದೆ ಅಲ್ಲಿ ಕೊಡುವಂಥ ಕೆಲಸವನ್ನು ಸರ್ಕಾರ ಮಾಡುತ್ತದೆ.

ಶ್ರೀ ಆರ್. ಧ್ರುವನಾರಾಯಣ (ಸಂತೇಮರಹಳ್ಳಿ) : ಮಾನ್ಯ ಅಧ್ಯಕ್ಷರೆ, ಪದವಿಪೂರ್ವ ಕಾಲೇಜು ಮತ್ತು ಪ್ರೌಢಶಾಲೆಗಳಲ್ಲಿ ನಮ್ಮ ಎಲ್ಲಾ ಭಾಗದಲ್ಲಿ ಕೂಡ ಶಾಲೆಗಳ ಕೊಠಡಿ ಮತ್ತು ಪೀಠೋಪಕರಣಗಳ ಕೊರತೆ ಬಹಳಷ್ಟು ಇದೆ. ಬಹುತೇಕ ಕೊಠಡಿಗಳ ಸಮಸ್ಯೆಯಿಂದ ಈ ಪ್ರೌಢಶಾಲೆಗಳಲ್ಲಿ ಪಡಸಾಲೆಯಲ್ಲಿ ಕುಳಿತುಕೊಂಡು, ಮರದ ನೆರಳಿನಲ್ಲಿ ಕುಳಿತುಕೊಂಡು ವಿದ್ಯಾಭ್ಯಾಸ ಮಾಡತಕ್ಕಂಥದ್ದನ್ನು ನಾವು ನೋಡುತ್ತಿದ್ದೇವೆ. ಅದರ ಜೊತೆಗೆ 10ನೇ ಕ್ಲಾಸಿನ 9ನೇ ಕ್ಲಾಸಿನಲ್ಲಿ ಓದತಕ್ಕಂಥ ಹೆಣ್ಣುಮಕ್ಕಳು ನೆಲದ ಮೇಲೆ ಕುಳಿತು ಪಾಠ ಕೇಳತಕ್ಕಂಥದ್ದು ಇದೆ. ಪೀಠೋಪಕರಣಗಳು ಮತ್ತು ಶಾಲಾ ಕೊಠಡಿಗಳ ಸಮಸ್ಯೆಯಂತೂ ಬಹಳಷ್ಟಿದೆ. ದಯಮಾಡಿ ಆ[illegible]ಗಳ ಅನುದಾನವನ್ನು ತಾವು ಬಿಡುಗಡೆ ಮಾಡಿಸಬೇಕೆಂದು ತಮ್ಮ ಮೂಲಕ ಮನವಿ ಮಾಡಿ[illegible]ತ್ತೇನೆ.

ಶ್ರೀ ಹೆಚ್. ನಿಂಗಪ್ಪ : ಮಾನ್ಯ ಅಧ್ಯಕ್ಷರೆ, ಬಹಳಷ್ಟು ಶಾಲೆಗಳಲ್ಲಿ ಮೂಲಭೂತ ಸೌಕರ್ಯಗಳ ಕೊರತೆ ಬಹಳಷ್ಟು ಇದೆ. ಮಾನ್ಯ ಸದಸ್ಯರು ಹೇಳಿದ ಹಾಗೆ ಕೊಠಡಿಗಳು ಇಲ್ಲ ಮತ್ತು ಶೌಚಾಲಯಗಳು ಸಹ ಇಲ್ಲ. ಕೆಲವು ಶಾಲೆಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಕೂಡ ಸರಿಯಾಗಿಲ್ಲ ಆದ್ದರಿಂದ, ಅದರ ಬಗ್ಗೆ ಮಾನ್ಯ ಸಚಿವರು ತೀವ್ರವಾದ ಗಮನಹರಿಸಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಬಿ.ಎಸ್. ಪಾಟೀಲ : ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿದ ಹಾಗೆ ಇದು ನಿಜ. ಅನೇಕ ಶಾಲೆಗಳಲ್ಲಿ ಮೂಲಭೂತವಾದ ಸೌಲಭ್ಯಗಳಿಲ್ಲ. ಆದ್ದರಿಂದ ಈ ಸಲ ಏನು ಮಾಡಿದ್ದೇವೆಂದರೆ, ಜಿಲ್ಲಾವಾರು ಲಭ್ಯತೆ ಎಷ್ಟಿದೆ, ಯಾವ್ಯಾವುದಕ್ಕೆ priority ಮೇಲೆ ಮಾಡಬೇಕೆನ್ನುವ ಸಮಗ್ರವಾದ ಇಡೀ ರಾಜ್ಯದ ಎಲ್ಲಾ ಜಿಲ್ಲೆಗಳಿಂದ ಮಾಹಿತಿಯನ್ನು ತರಿಸಿದ್ದೇವೆ. ಮಾಹಿತಿ ತರಿಸಿ ಎಲ್ಲೆಲ್ಲಿ ಕನಿಷ್ಠ ಸೌಲಭ್ಯ ಇರುವುದಿಲ್ಲದಂಥ ಶಾಲೆಗಳ ಬಗ್ಗೆ ಏನು ಮಾನ್ಯ ಸದಸ್ಯರು ಹೇಳಿದರು, ಹೆಣ್ಣುಮಕ್ಕಳು ಅಲ್ಲಿ ಗಡದ ಕೆಳಗಡೆ ಕುಳಿತುಕೊಳ್ಳುವುದನ್ನು ನೀಡಿದ್ದೇವೆ ಎಂದು ಅದೆಲ್ಲವನ್ನೂ ಈ ಸಲ ಸಮಗ್ರವಾದ ಚಿತ್ರಣವನ್ನು ತೆಗೆದು ಎಲ್ಲಿ ಕನಿಷ್ಠ ಸೌಲಭ್ಯಗಳಿಲ್ಲ ಅಲ್ಲಿಗೆ top priority ಕೊಟ್ಟು ಮಾಡುತ್ತೇವೆ. ಆನಂತರ ಪ್ರೌಢಶಾಲೆಗಳಿಗೆ particular ಆಗಿ ಹೆಣ್ಣುಮಕ್ಕಳ ಶಾಲೆಗಳೇನಿವೆ, ಅಲ್ಲಿಗೆ ಶೌಚಾಲಯವನ್ನು ಮಾಡಲಿಕ್ಕೆ RDPR Department ನ ಸಹಯೋಗದೊಂದಿಗೆ 23 ಸಾವಿರ ಶಾಲೆಗಳಿಗೆ ಶೌಚಾಲಯದ ವ್ಯವಸ್ಥೆಯನ್ನು ಮಾಡಿದ್ದೇವೆ. ನೀರಿನ ವ್ಯವಸ್ಥೆಗೆ, ಮಳೆ ಕೊಯ್ಲನ್ನು ಮಾಡಿ ನೀರನ್ನು ಅಲ್ಲಿ ಇಂಗುವಂತೆ ವ್ಯವಸ್ಥೆ ಮಾಡಿದೆ. ಅಲ್ಲಿ ಆಗದಿದ್ದರೆ, ಏನು ಊರಿಗೆ ಯಾವ ನೀರಿನ ಸೌಲಭ್ಯವಿದೆ, ಅಲ್ಲಿಂದ ನೇರವಾದಂಥ ಪೈಪನ್ನು ಹಾಕಿ ಅದಕ್ಕೆ ನೀರಿನ ಸೌಲಭ್ಯವನ್ನು ಮಾಡುವಂಥ ವ್ಯವಸ್ಥೆಯನ್ನು ಮಾಡಲಿಕ್ಕೆ ಕೂಡ ಸಾಕಷ್ಟು ಪ್ರಗತಿಯಲ್ಲಿ ಅವೆಲ್ಲಾ ಕೆಲಸಗಳು ನಡೆಯುತ್ತಿವೆ. ಏಪ್ರಿಲ್, ಮೇ ತಿಂಗಳಿನಲ್ಲಿ ಸಂಪೂರ್ಣವಾಗಿ ಇದರ ಬಗ್ಗೆ ಚರ್ಚೆ ಮಾಡಿ ಕನಿಷ್ಠ ಸೌಲಭ್ಯಗಳನ್ನು ಹೊಂದಿಲ್ಲದ ಯಾವ ಶಾಲೆಗಳು ಇವೆ, ಅವುಗಳಿಗೆ ಮೊದಲನೇ priority ಕೊಟ್ಟು ಮಾಡುವಂಥ ಕೆಲಸವನ್ನು ಸರ್ಕಾರ ಮಾಡುತ್ತದೆ.

ಶ್ರೀ ಹೆಚ್. ನಿಂಗಪ್ಪ : ಯಾವ ಅವಧಿಯೊಳಗಾಗಿ ಅದನ್ನು ಮಾಡಿಕೊಡಲಾಗುವುದು ಎಂಬುದನ್ನು ಹೇಳಬೇಕು.

ಅಧ್ಯಕ್ಷರು : ಅಂಬಿಕಾ ಈ ಪ್ರಶ್ನೆ ಮುಗಿದಿದೆ.

ಕಾವೇರಿ ಜಲಾನಯನದ ನ್ಯಾಯಾಧಿಕರಣದ ಕಲಾಪಕ್ಕೆ ಸಂಬಂಧಪಟ್ಟಂತೆ ನ್ಯಾಯವಾದಿಗಳನ್ನು ಬದಲಾವಣೆ ಮಾಡುವ ಬಗ್ಗೆ

17 (150) **ಶ್ರೀ ಎಸ್.ಎಸ್. ನಾಗರಾಜ್ (ಚಾಮರಾಜನಗರ)**: ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕಾವೇರಿ ನ್ಯಾಯಮಂಡಳಿಯ ತೀರ್ಪು ಯಾವಾಗ ಹೊರಬೀಳಬಹುದೆಂದು ಸರ್ಕಾರವು ನಿರೀಕ್ಷಿಸಿದೆ;